**ಸಾಕ್ಷಿಯನ್ನು ದಿಃ 15.07.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನ್ನ ಜನ್ಮ ದಿನಾಂಕ ಗೊತ್ತು. ನಾನು ಅಕ್ಟೋಬರ್ 1966 ರಲ್ಲಿ ಹುಟ್ಟಿರುತ್ತೇನೆ.

2. ನಮ್ಮ ಊರಿನಲ್ಲಿ ಸಣ್ಣೇಗೌಡ ಎಂಬುವವರು 2 ಜನ ಇದ್ದಾರೆ.

3. ಅಣ್ಣೇಗೌಡ ನನ್ನ ತಂದೆ, ಸಣ್ಣೇಗೌಡ ನನ್ನ ಚಿಕ್ಕಪ್ಪ. ಇನ್ನೊಬ್ಬ ಸಣ್ಣೇಗೌಡರ ತಂದೆ ಹೆಸರು ನನಗೆ ಗೊತ್ತಿಲ್ಲ.

4. ಸದರಿಯವರ ಮನೆ ಹಾಗೂ ನಮ್ಮ ಚಿಕ್ಕಪ್ಪ ಸಣ್ಣೇಗೌಡರ ಮನೆ ಅಕ್ಕಪಕ್ಕ ಇವೆ.

5. ಸಣ್ಣೇಗೌಡ ರವರನ್ನು ನಾನು ಸುಮಾರು 12-13 ವರ್ಷದವನಿದ್ದಾಗ ನೋಡಿದ್ದೇನೆ. ಅವರು ಮದುವೆಯಾಗಿದ್ದು ಗೊತ್ತು. ನಾನು ನನ್ನ ತಂದೆ ಅವರ ಮದುವೆಗೆ ಹೋಗಿದ್ದೆವು. ಅವರ ಮದುವೆ ಚುಂಚನಕಟ್ಟೆ ದೇವಸ್ಥಾನದಲ್ಲಿ ಆಗಿದೆ.

6. ನ್ಯಾಯಾಲಯದ ಮುಂದೆ ಇರುವ ಯೆಶೋದಮ್ಮ ನವರು ಸಣ್ಣೇಗೌಡರ ಮೊದಲನೇ ಹೆಂಡತಿ ಹಾಗೂ ನಾಗರಾಜ ರವರು ಮೊದಲನೇ ಮಗ ಇರುತ್ತಾರೆ. ಸದರಿ ಯಶೋದಮ್ಮ ನವರ ಮದುವೆಯನ್ನು ನಾನು ನೊಡಿಲ್ಲ.

7. ಯಶೋದಮ್ಮ, ನಾಗರಾಜು ರವರು ಬೆಟ್ಟೇಗೌಡನ ಕೊಪ್ಪಲು ಗ್ರಾಮದಲ್ಲಿ ವಾಸವಿದ್ದಾರೆ ಎಂದರೆ ಸರಿಯಲ್ಲ, ಅವರು ಕೆ.ಆರ್.ನಗರದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಸದರಿ ಯಶೋದಮ್ಮ ನವರು ಚೆನ್ನಾಗಿ ಮಾತಾಡುತ್ತಾರೆ. ಅವರೊಂದಿಗೆ ಯಾವುದೇ ವೈಮನಸ್ಸು ಇಲ್ಲ. ನಮ್ಮ ಹಾಗೂ ಅವರ ಜಮೀನು ಅಕ್ಕಪಕ್ಕ ಇವೆ.

8. ರಾಮೇಗೌಡ ಎಂದರೆ ನನ್ನ ಅಣ್ಣ. ಸದರಿಯವರು ಹಾಗೂ ನಾವು ಬ್ರಹ್ಮನಂದ, ನಾಗಾನಂದ, ದೇವರಾಜು ರವರ ಮೇಲೆ ಡಿಡಿಎಲ್ಆರ್ ನ್ಯಾಯಾಲಯದಲ್ಲಿ ಪ್ರಕರಣ ಹಾಕಿದ್ದೇವೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಜಮೀನು ಬಗ್ಗೆ ನಿಮಗೆ ಹಾಗೂ ಅವರಿಗೆ ವಿವಾದ ಇದೆ ಎಂದರೆ ಸರಿ. ಆ ಕಾರಣಕ್ಕೆ ನಿಮಗೆ ಹಾಗೂ 1 ಮತ್ತು 2 ನೇ ಪ್ರತಿವಾದಿಗಳ ನಡುವೆ ಮಾತುಕತೆ ಇರುವುದಿಲ್ಲ ಎಂದರೆ ಸರಿ.

9. ಸ.ನಂ.142 ರಲ್ಲಿ 19 ಪೋಡು ಆಗಿ, ಅವರು ನಕಾಶೆ ಮಾಡಿಕೊಂಡ ವಿಚಾರವಾಗಿ ಅವರ ಮೇಲೆ ನಿಮಗೆ ದ್ವೇಷ ಎಂದರೆ ಸರಿಯಲ್ಲ.

10. ವಾದಿ ದಿನೇಶ ಹಾಗೂ ನೀವು ಚೆನ್ನಾಗಿದ್ದೀರಾ ಎಂದರೆ ಸರಿ.

11. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ಈ ಹಿಂದೆ ನ್ಯಾಯಾಲಯದಲ್ಲಿ ಕೇಸ್ ನಡೆದ ವಿಚಾರ ನನಗೆ ಗೊತ್ತಿಲ್ಲ. ವಾದಿ ಸಹ ನನಗೆ ಆ ಬಗ್ಗೆ ಹೇಳಿಲ್ಲ.

12. ಸಣ್ಣೇಗೌಡ ಹಾಗೂ ಕೆಂಪಮ್ಮ ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅವರ ಮದುವೆಯಾದ ಬಗ್ಗೆ ಆಹ್ವಾನ ಪತ್ರಿಕೆ ಇಲ್ಲ, ದಿನಾಂಕ ನನಗೆ ಗೊತ್ತಿಲ್ಲ. ಅವರು ಮದುವೆಯಾದ ಬಗ್ಗೆ ಯಾವುದೇ ದಾಖಲೆ ನನ್ನ ಬಳಿ ಇಲ್ಲ. ಅವರ ಆಧಾರ್ ಕಾರ್ಡ್ ಹಾಗೂ ಮತದಾರರ ಚೀಟಿಯಲ್ಲಿ ಏನು ಹೆಸರು ಇವೆ ಎಂದು ಗೊತ್ತು.

13. ಯಶೋದಮ್ಮ ನವರ ಪತಿಯ ಹೆಸರು ಎನ್. ಸಣ್ಣೆಗೌಡ ಎಂದರೆ ಸರಿ. ಸದರಿ ಎನ್. ಸಣ್ಣೇಗೌಡ ರವರ ತಂದೆ ಹೆಸರು ನನಗೆ ಗೊತ್ತಿಲ್ಲ.

14. ವಾದಿಯ ತಂದೆ ಸಣ್ಣೇಗೌಡರ ತಂದೆ ಹೆಸರು ನನಗೆ ಗೊತ್ತಿಲ್ಲ.

15. ನಿಮಗೆ ಹಾಗೂ ಪ್ರತಿವಾದಿಗಳ ನಡುವೆ ಜಮೀನು ವಿಚಾರವಾಗಿ ದ್ವೇಷ ಇದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

16. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಮದುವೆ ನೋಡಿಲ್ಲದಿದ್ದೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ